KATK900005432019

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತಿಪಟೂರು**

**ಎಸ್.ಸಿ.ಸಂಖ್ಯೆ: 10039/2019**

**ಪ್ರಮಾಣೀಕರಿಸಿದ ದಿನಾಂಕ: 25-09-2024**
**ಚಾ.ಸಾ-26**
**ಪ್ರಾ.ಸಾ-12**

| | |
|---|---|
| ಹೆಸರು | ಶಿವಕುಮಾರಯ್ಯ ಎಸ್ |
| ತಂದೆ ಹೆಸರು | ಲೇಟ್ ಸಿದ್ದಲಿಂಗಯ್ಯ |
| ವಯಸ್ಸು | 50 ವರ್ಷ |
| ಉದ್ಯೋಗ | ಹೆಚ್.ಸಿ-336, ಗುಬ್ಬಿ ಪೊಲೀಸ್ ಠಾಣೆ |
| ವಾಸಸ್ಥಳ | ಸಾಗರನಹಳ್ಳಿ, ನಿಟ್ಟೂರು ಹೋಬಳಿ |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು 2018 ರಿಂದ 2022 ರವರೆಗೆ ತುರುವೇಕೆರೆಯ ಪೊಲೀಸ್ ಠಾಣೆಯಲ್ಲಿ ಹೆಚ್ ಸಿಯಾಗಿ ಕೆಲಸ ನಿರ್ವಹಿಸುತ್ತಿರುವಾಗ, ದಿನಾಂಕ 16.02.2019 ರಂದು ಹಗಲು ಎಸ್.ಹೆಚ್.ಒ ಆಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಸಂಜೆ ಸುಮಾರು 6 ಗಂಟೆ ಸಮಯದಲ್ಲಿ ತಂಡಗ ಗ್ರಾಮದ ಗೋವಿಂದರಾಜು ಎಂಬ ವ್ಯಕ್ತಿಯು ಠಾಣೆಗೆ ಬಂದು ಪರಿಚಯ ಮಾಡಿಕೊಂಡು ಆತನ ಗ್ರಾಮದಲ್ಲಿ ಸುರೇಶ್ ಹಂದಿ ಭೇಟೆಯಾಡುತ್ತಾನೆಂದು, ಇದರ ಮಾಹಿತಿಯನ್ನು ತಿಳಿಸುವ ಸಲುವಾಗಿ ನನ್ನ ಫೋನ್ ನಂಬರ್ ಕೇಳಿ ಪಡೆದುಕೊಂಡು ಹೋಗಿದ್ದ. ನಂತರ ಕರ್ತವ್ಯ ಮುಗಿಸಿಕೊಂಡು ಮನೆಗೆ ವಾಪಸ್ ಹೋಗುವ ಸಮಯಕ್ಕೆ ಅಂದರೆ ಸುಮಾರು ರಾತ್ರಿ 9 ಗಂಟೆ ಸಮಯಕ್ಕೆ ಮೊಬೈಲ್ ಸಂಖ್ಯೆ 9632056545 ರಿಂದ ಗೋವಿಂದರಾಜು ನನಗೆ ಫೋನ್ ಮಾಡಿ ಆ ದಿನ ಸುರೇಶ್ ಹಂದಿ ಭೇಟಿಯಾಡುತ್ತಾನೆಂದು ಅದರ ಫೋಟೋ ತೆಗೆದು ನನಗೆ ಕಳುಹಿಸುತ್ತೇನೆಂದು ತಿಳಿಸಿದ್ದ. ನಾನು ಸರಿ ಎಂದು ಮನೆಗೆ ಹೊರಟೆ, ಆದರೆ ಯಾವುದೇ ಚಿತ್ರೀಕರಣವನ್ನು ಗೋವಿಂದರಾಜು ನನಗೆ ಕಳುಹಿಸಿರಲಿಲ್ಲ.

ಮಾರನೇ ದಿನ ತಂಡಗ ಗ್ರಾಮದ ರಾಮ ಮಂದಿರದ ಬಳಿ ಸುರೇಶ್ ಕೊಲೆಯಾಗಿದ್ದ ಎಂದು ಬೆಳಗ್ಗೆ ಠಾಣೆಗೆ ಬಂದಾಗ ತಿಳಿಯಿತು. ಸುರೇಶ್ ನ ಪತ್ನಿ ಈ ಬಗ್ಗೆ ದೂರು ಕೊಡಲು ಬಂದಿದ್ರು. ಆಗ ತಿಳಿಯಿತು.

ದಿನಾಂಕ 01.03.2019 ರಂದು ಸದರಿ ಗೋವಿಂದರಾಜುರವರನ್ನು ಸುರೇಶ್ ರವರನ್ನು ಕೊಲೆ ಮಾಡಿದ್ದಾನೆಂಬ ಆರೋಪದ ಮೇಲೆ ಹಾಜರು ಪಡಿಸಿದಾಗ ನಮ್ಮ ತನಿಖಾಧಿಕಾರಿಯವರಿಗೆ ಮೇಲಿನ ವಿಚಾರವನ್ನು ತಿಳಿಸಿದೆ. ಆ ಸಂದರ್ಭದಲ್ಲಿ ವಿಚಾರಣೆ ಮಾಡುವಾಗ ಗೋವಿಂದರಾಜುರವರಿಗೆ ಸುರೇಶ್ ನ ಮೇಲೆ ಕೆರೆಯಲ್ಲಿ ಮೀನು ಹಿಡಿದು ಹರಾಜು ಹಾಕುವ ವಿಚಾರದಲ್ಲಿ ವೈಷಮ್ಯ ಇತ್ತು ಎಂದು ತಿಳಿಯಿತು. ಈ ವಿಚಾರವಾಗಿ ಗೋವಿಂದರಾಜು ಮತ್ತು ಸುರೇಶ್ ಜಗಳ ಮಾಡಿಕೊಂಡಿದ್ದು ಗೋವಿಂದರಾಜು ಸುರೇಶ್ ಗೆ ಹೊಡೆದ ಬಗ್ಗೆ ಸುರೇಶ್ ಈ ಹಿಂದೆ ದೂರನ್ನು ನೀಡಿದ್ದರೆಂದು, ಗೋವಿಂದರಾಜು ದಂಡ ಕಟ್ಟಿದ್ದರೆಂದು ಸಹಾ ತಿಳಿಯಿತು. ಈ ಕುರಿತು ಹಿಂದಿನ ದ್ವೇಷದಿಂದ ಗೋವಿಂದರಾಜು ಸುರೇಶ್ ರವರನ್ನು ಹತ್ಯೆ ಮಾಡಿದ್ದಾನೆಂದು ತಿಳಿಯಿತು. ಈ ಬಗ್ಗೆ ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ. ಗೋವಿಂದರಾಜು ನ್ಯಾಯಾಲಯದ ಮುಂದೆ ಇದ್ದಾರೆ. (ಸಾಕ್ಷಿ ಆರೋಪಿಯನ್ನು ಗುರುತಿಸಿದ್ದಾರೆ).

**<u>ಪಾಟೀ ಸವಾಲು, ಆರೋಪಿ ಪರ ಶ್ರೀ ಎಂ.ಡಿ ವಕೀಲರಿಂದಃ</u>**

ಪೊಲೀಸ್ ಠಾಣೆಯಲ್ಲಿ ನಮಗೆ ನಿಖರವಾದ ಕೆಲಸದ ಸಮಯವನ್ನು ನಿಗದಿಪಡಿಸಿಲ್ಲ. ಡೆಪ್ಯೂಟ್ ಮಾಡಿದ ನಂತರ ರಿಲೀವ್ ಆದೇಶ ಬರುವವರೆಗೂ ಕೆಲಸ ನಿರ್ವಹಿಸಬೇಕು.

ದಿನಾಂಕ 16.02.2019 ರಂದು ಬೆಳಗ್ಗೆ 8 ಗಂಟೆಯಿಂದ ರಾತ್ರಿ 8.30 ಗಂಟೆಯವರೆಗೆ ಕೆಲಸ ನಿರ್ವಹಿಸಿದ್ದೇನೆ. ಗೋವಿಂದರಾಜುರವರು ಸುರೇಶ್ ರವರು ಕಾನೂನು ಬಾಹಿರ ಕೆಲಸ ಮಾಡ್ತಾ ಇದ್ದಾರೆ ಎಂದು ತಿಳಿಸಿದ ನಂತರ ನಾನು ಅದರ ಬಗ್ಗೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿಲ್ಲ. ಗೋವಿಂದರಾಜುರವರನ್ನು ಹಾಜರು ಪಡಿಸುವ ಮೊದಲು ಸಹಾ ಆತ ಸುರೇಶ್ ನ ಬಗ್ಗೆ ನೀಡಿದ ಮಾಹಿತಿಯನ್ನು ನಮ್ಮ ಹಿರಿಯ ಅಧಿಕಾರಿಗಳಿಗೆ ತಿಳಿಸಿದ್ದೆ. ಗೋವಿಂದರಾಜುರವರನ್ನು ಹಾಜರು ಪಡಿಸುವಾಗ ಮಾತ್ರ ನನಗೆ ಆರೋಪಿ ಮತ್ತು ಸುರೇಶ್ ರವರ ನಡುವೆ ಮೀನು ಹರಾಜು ಹಾಕುವ ವಿಚಾರದಲ್ಲಿ ದ್ವೇಷ ಇತ್ತು ಎಂದು ತಿಳಿದಿದ್ದು. ಗೋವಿಂದರಾಜು ಫೋನ್ ನಂಬರ್ ತೆಗೆದುಕೊಂಡು

ಹೋದದ್ದನ್ನು ನನ್ನ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಹೇಳಿಕೆಯನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಹಾಗೆನಾದ್ರು ಗೋವಿಂದರಾಜು ನನಗೆ ವಿಚಾರ ತಿಳಿಸಿದ್ರೆ, ನಾನು ಸುರೇಶ್ ನನ್ನು ಫಾಲೋ ಮಾಡ್ತಿದ್ದೆ ಎಂದರೆ ಅದೇ ದಿನ ರಾತ್ರಿ ಘಟನೆ ನಡೆದಿದ್ರಿಂದ ಫಾಲೋ ಮಾಡಿಲ್ಲ. ಹಾಗೆನಾದ್ರು ಗೋವಿಂದರಾಜು ನನಗೆ ವಿಚಾರ ತಿಳಿಸಿದ್ರೆ, ಅದೇ ದಿನ ನಾನು ನನ್ನ ಹಿರಿಯ ಅಧಿಕಾರಿಗಳಿಗೆ ತಿಳಿಸ್ತಾ ಇದ್ದೆ ಎಂದರೆ ಅವೇಳೆ ಯಾಗಿದ್ದರಿಂದ ಮತ್ತು ಚಿತ್ರೀಕರಣ ಕಳುಹಿಸದೇ ಇದ್ದಿದ್ದರಿಂದ ನಾನು ತಿಳಿಸಿಲ್ಲ. ನಾನು ನನ್ನ ಹಿರಿಯ ಅಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರುವಿಚಾರಣೆ ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**